Establishment of cold Storages in the State

136 - Sri N. Suresh Kumar (Rajajinagar) : Will the Minster of State for Horticulture. be pleased to state.

A) Is there any plan for establishing Cold Storage for fruit and Vegetables in the State? In which districrs it will be established and that is the expenditure involved?

Sri D.T. Jayakumar (Minister of state for Horticulture) :

A) Yes. It is plenned to establish 3 cold storages in Bangalore diyision 3 cold storages in Mysore divicion, 10 cold storages and 4 per-cooling Units in Belgaum division and 4 cold storages and one pre-cooling unit in Gulbarga division. In all 20 Cold storages and 5 pre-cooling Units are planned to be established.

Total expenditure involved is Rs. 1329.40 lakhs. It is intended to raise funds from NCDC, NHE and the State Government.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 20 ಶೀತಲ ಗೃಹಗಳು ಮತ್ತು ಐದು ಪ್ರೀ ಕೂಲಿಂಗ್ ಘಟಕಗಳನ್ನು ನಿರ್ಮಿಸಲು ಯೋಚಿಸಲಾಗಿದೆಯೆಂದು ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ನನ್ನ ಪ್ರಶ್ನೆಯೇನೆಂದರೆ ಈಗಾಗಲೇ ಬೆಂಗಳೂರು ಹಾಗೂ ಇತರೆಡೆಗಳಲ್ಲಿ ನಿರ್ಮಿಸಿರುವ ಶೈತ್ಯಾಗಾರಗಳೆಲ್ಲವೂ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕೋಲಾರ ಜಿಲ್ಲೆಯ ರೈತರು ತಾವು ಬೆಳೆದಂಥ ಆಲೂಗಡ್ಡೆ ಮತ್ತು ಈರುಳ್ಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಾಗ ನಿರ್ಮಿಸಿರುವ ಶೈತ್ಯಾಗಾರಗಳು ಯವುದೇ ರೀತಿಯ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬೆಂಗಳೂರು ಕೃಷಿಕ ಸಮಾಜಕ್ಕೆ ಹೊಂದಿಕೊಂಡಂತಿರುವ ಶೈತ್ಯಾಗಾರ ಪೂರ್ಣಗೊಂಡ ನಂತರ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆ ಶೈತ್ಯಾಗಾರ ಎರಡು ಸಲ ದುರಸ್ತಿಗೊಳಗಾಯಿತು. ಆದರೂ ಕೂಡ ಮತ್ತೆ ಶಿಥಿಲಗೊಂಡು ಯಾವುದೇ ರೀತಿಯ ಉಪಯೋಗಕ್ಕೆ ಬಂದಿಲ್ಲ. 1990-91ರ ಲೆಕ್ಕ ಪರಿಶೋಧನಾ ವರದಿ ಪ್ರಕಾರ ಬಹಿರಂಗ ಟೆಂಡರ್ ಕರೆಯದೆ, ಕೋಟೇಶನ್ ಕರೆಯದೆ ಅಲ್ಲದೆ, ಗುತ್ತಿಗೆದಾರರಿಗೆ ಕೆಲಸ ಮುಗಿಸುವ ಮುಂಚೆಯೇ ಮುಂಗಡ ಹಣ ಕೊಟ್ಟು, ಈ ರೀತಿಯ ಕಳಪೆ ಕಾಮಗಾರಿ ನಿರ್ವಹಿಸಿದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳಬೇಕೆಂದು ಯೋಚಿಸಿದೆ? ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಪ್ರಸ್ತಾಪಿಸುತ್ತಿರುವ ಪ್ರಶ್ನೆ ಬೆರೆ ರೀತಿಯಾದಾಗಿದೆ. ಅದು ಕೇಳಿರುವ ಪ್ರಶ್ನೆಯೇನೆಂದರೆ ರಾಜ್ಯದಲ್ಲಿ ಹಣ್ಣು-ತರಕಾರಿಗಳನ್ನಿಡುವ ಶೈತ್ಯಾಗಾರವನ್ನು ಸ್ಥಾಪಿಸುವ ಯೋಜನೆಯೇನಾದರೂ ಇದೆಯೇ? ಇದ್ದರೆ, ಯಾವ್ಯಾವ ಜಿಲ್ಲೆಗಳಲ್ಲಿ ಸ್ಥಾಪಿಸುವ ಯೋಜನೆ ಇದೆ? ಮತ್ತು ಇದಕ್ಕೆ ತಗಲುವ ಖರ್ಚು ಎಷ್ಟು ಎಂದು. ಆದರೆ ಈಗ ನೀವು ಕೇಳುತ್ತಿರುವ ಪ್ರಶ್ನೆಯೇ ಬೇರೆಯಾದಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ನನ್ನ ಪ್ರಶ್ನೆಯೇನೆಂದರೆ ಈಗಾಗಲೇ ಅನೇಕ ಕಡೆಗಳಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸಿ ಏನು ಕೈಸುಟ್ಟುಕೊಂಡಿದ್ದೀರಿ, ಇದರ ಅನುಭವದ ಆಧಾರದ ಮೇಲೆ ಮತ್ತೆ ಏಕೆ ಹೊಸದಾಗಿ ಶೈತ್ಯಾಗಾರಗಳನ್ನು ನಿರ್ಮಿಸುತ್ತಿದ್ದೀರಿ ಎಂಬುದು ಪ್ರಶ್ನೆ.

ಶ್ರೀ ಡಿ.ಟಿ. ಜಯಕುಮಾರ್ : ಈಗಾಗಲೇ ನಾವು ವಿಶೇಷವಾಗಿ ಸಮಗ್ರ ಯೋಜನೆಯನ್ನು ತಯಾರಿಸಿದ್ದು,. ಸುಮಾರು ಅರವತ್ತಾರೂವರೆ ಕೋಟಿ ರೂಪಾಯಿಗಳ ಯೋಜನೆಯಲ್ಲಿ ತೋಟಗಾರಿಕೆ ಉತ್ಪನ್ನಗಳ ಪರಿಷ್ಕರಣೆ, ಸಂಸ್ಕರಣೆ ಸಂಗ್ರಹಣೆ

ಮುಂತಾದವುಗಳನ್ನೊಳಗೊಂಡಂತೆ ಇರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಒಪ್ಪಿದೆ. ಅದೇ ರೀತಿ ನೂರು ಕೋಟಿ ರೂಪಾಯಿಗಳ ಒಂದು ಯೋಜನಾ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈಗಾಗಲೇ 66 ಕೋಟಿಗೆ ಕೇಂದ್ರ ಸರ್ಕಾರ ಒಪ್ಪಿದೆ. ಅದರ ಪ್ರಕಾರ ನಾನು ಉತ್ತರ ಕೊಟ್ಟಿದ್ದೇವೆ. ಬೆಂಗಳೂರಿನ ಹಡ್ಸನ್ ವೃತ್ತದಲ್ಲಿ ನಿರ್ಮಿಸಿರುವ ಶೈತ್ಯಾಗಾರದ ಕುರಿತು ತಾವು ಹೇಳಿದಿರಿ. ನೀವು ಹೇಳುತ್ತಿರುವುದು ನಿಜ. ಸದರಿ ಶೈತ್ಯಾಗಾರವನ್ನು ಸರಿಯಾದಂಥ ರೀತಿಯಲ್ಲಿ ದುರಸ್ತಿ ಮಾಡಿಕೊಟ್ಟಿರುವುದಿಲ್ಲ, ಅಲ್ಲದೆ, ಮುಂಗಡವಾಗಿ ಹಣ ಕೊಟ್ಟಿರುವುದೂ ನಿಜ. ಆದರೆ, ಯಾವ ರೂಪದಲ್ಲಿ ಹಣ ಕೊಟ್ಟಿದ್ದಾರೆಂದು ಬಿಡಿಸಿ ಹೇಳಿರುವುದರಿಂದ ಆ ಕುರಿತು ಮಾಹಿತಿ ತರಿಸಿ ಪರಿಶೀಲಿಸಿ ಯಾರು ತಪ್ಪೆಸಗಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ತಯಾರಿದ್ದೇನೆ.

ಉಳ್ಳೂರು- ಮಚ್ಚಟ್ಟು ವ್ಯವಸಾಯ ಸಹಕಾರ ಸಂಘದ ಅವ್ಯವಹಾರ

191 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳೂರು ಮಚ್ಚಟ್ಟು ವ್ಯವಸಾಯ ಸೇವಾ ಸಹಕಾರ ನಾಮನಿರ್ದೇಶನ ಮಾಡಿದ ಸದಸ್ಯರನ್ನು ಹೊರಗಿಟ್ಟು ಆಡಳಿತ ಮಂಡಳಿಯ ಸಭೆಯನ್ನು ಕರೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಆಡಳಿತ ಮಂಡಳಿಯ ಸಭೆಯು ಅಕ್ರಮವಾಗಿ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಅಕ್ರಮವನ್ನು ಸರಿಪಡಿಸಲು ತನಿಖೆ ನಡೆಸಲು ಸರಕಾರ ಆದೇಶಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಂಘದ ಆಡಳಿತ ಮಂಡಳಿ ಸಭೆಗಳನ್ನು ಸರ್ಕಾರದ ನಾಮನಿರ್ದೇಶಿತ ಸದಸ್ಯರನ್ನೊಳಗೊಂಡು ನಡೆಸಲಾಗುತ್ತಿದೆ.

ಆ) ಸಂಘದ ಆಡಳಿತ ಮಂಡಳಿ ಸಭೆಗಳು ಅಕ್ರಮವಾಗಿ ನಡೆದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಉಪ ಪ್ರಶ್ನೆ ಕೇಳುವಂಥಾದ್ದು ಏನೂ ಇಲ್ಲ. ನಾನು ಕೇಳಿರುವ ಪ್ರಶ್ನೆಗಳಿಗೆಲ್ಲಾ 'ಇಲ್ಲ' ವೆಂದು ಉತ್ತರಿಸಿದ್ದಾರೆ. ಇದುವರೆವಿಗೂ ಕೂಡ ನನ್ನ ಪ್ರಶ್ನೆಗಳಿಗೆ ಇದೇ ರೀತಿ 'ಇಲ್ಲ' ವೆಂದು ಕೊಟ್ಟಿರುವ ಉತ್ತರಗಳನ್ನು ಸತತವಾಗಿ ನೋಡುತ್ತಿದ್ದೇನೆ. ನಿನ್ನೆಯೂ ಕೂಡ ಪ್ರಶ್ನೋತ್ತರ ಕಾಲದಲ್ಲಿ ಇಂತಹ ತಾಲ್ಲೂಕಿನಲ್ಲಿ ಇಂತಹ ಗ್ರಾಮದಲ್ಲಿ ಗ್ರಾನೈಟ್ ಲೂಟಿಯಾಗುತ್ತಿದೆಯೇ? ಎಂದು ಕೇಳಿದ್ದಕ್ಕೆ ಅದಕ್ಕೂ 'ಇಲ್ಲ'ವೆಂದು ಉತ್ತರ ಕೊಟ್ಟರು. ಇವೊತ್ತು ವ್ಯವಸಾಯ ಸೇವಾ ಸಹಕಾರ ಸಂಘದ ಕುರಿತು ಪ್ರಶ್ನೆಗಳನ್ನು ಕೇಳಿರುವುದಕ್ಕೆ ಅದೇ ರೀತಿಯ ಉತ್ತರಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ನಿಮ್ಮ ಜನ್ಮ ಕುಂಡಲಿಯನ್ನು ಸ್ವಲ್ಪ ಪರೀಕ್ಷೆ ಮಾಡಿಸಿ. ಏಕೋ ನೀವು ಕೇಳಿರುವ ಪ್ರಶ್ನೆಗಳಿಗೆಲ್ಲಾ ಉತ್ತರವಾಗಿ 'ಇಲ್ಲ'ವೆಂದು ಬರುತ್ತಿದೆ.